## ಕಳೆದ ಸಂಚಿಕೆಯಲ್ಲಿ



ಸ್ಕೈಪ್ ಮೂಲಕ ಮಗನೊಂದಿಗೆ ನ್ಯಾನ್ಸಿ ಮಾತನಾಡುತ್ತಿರುವ ಸಮಯದಲ್ಲಿಯೇ ಅವಳ ಅಪ್ಪ ಕೂಗಿಕೊಂಡರು. ನ್ಯಾನ್ಸಿ ಆತುರದಲ್ಲಿ ಮಾತು ಮುಗಿಸಿ ಬರುವಷ್ಟರಲ್ಲಿ ಅವರು ಪ್ರಜ್ಞೆ ಕಳೆದುಕೊಂಡಿದ್ದರು. ಆಸ್ಪತ್ರೆಗೆ ಸೇರಿಸಿದ್ದು ಉಪಯೋಗವಾಗಿಲ್ಲ. ಸಹೋದರರನನ್ನು ಕಳಕೊಂಡು ಅನಾಥಭಾವ ಅನುಭವಿಸುತ್ತಿದ್ದ ನ್ಯಾನ್ಸಿ ಈಗ ಅಪ್ಪನನ್ನು ಕಳಕೊಂಡು ತಬ್ಬಲಿಯಂತಾದಳು. 'ಯೋಚಿಸಬೇಡ. ನಾನಿದ್ದೇನೆ' ಎಂದು ಕುಂಜುಮ್ಮಾ ತಬ್ಬಿಕೊಂಡಳು. ತವರಿನಲ್ಲಿ ಆಸರೆಯಾಗಿದ್ದ ಅಪ್ಪನನ್ನು ಕಳಕೊಂಡಿದ್ದ ನ್ಯಾನ್ಸಿ ಮತ್ತೆ ಡೆನ್ಮಾರ್ಕ್‌ಗೆ ಹೊರಟಳು. ಅಲ್ಲಿ ವಿಚ್ಛೇದನದ ಪ್ರಕ್ರಿಯೆ ಯಾಂತ್ರಿಕವಾಗಿ ನಡೆಯಿತು. ಲಾರ್ಸ್‌ನ ತಾಯಿ ಲಾರಾ ಬ್ರೈನ್ ಸರ್ಜರಿಗೆ ಒಳಗಾಗಿದ್ದರು. ಅವರಯ ಚೇತರಿಸಿಕೊಳ್ಳದೆ ಕೊನೆಯುಸಿರೆಳೆದಾಗ ನ್ಯಾನ್ಸಿ ಮತ್ತಷ್ಟು ಒಂಟಿಯಾದಳು. ಲಾರಾ ತನ್ನ ನಾಯಿಮರಿ ಸೇರಿದಂತೆ ಅನೇಕ ವಸ್ತುಗಳನ್ನು ನ್ಯಾನ್ಸಿಗಾಗಿ ಬಿಟ್ಟುಹೋಗಿದ್ದಳು. ಜೀವನಚಕ್ರ ಮತ್ತೊಂದು ಸುತ್ತು ಹೊರಳಿತ್ತು. ಮತ್ತೆ ಹೊಸ ಕನಸು, ನವ ವಸಂತದ ಹಂಬಲ.

ಮನೆಯಲ್ಲಿ ಉಳಿದಿದ್ದೇವೆ, ನಾನು ನಿನ್ನನ್ನು ಭೇಟಿಯಾಗಲು ಬಯಸುತ್ತೇನೆ' ಎಂಬುದು ಆ ಸಂದೇಶವಾಗಿತ್ತು. ನಾನು ಮಡ್ ಐರ್ಲೆಂಡ್ ಬೀಚ್‌ನಲ್ಲಿ ಒಂದು ಗೆಟ್ ಟುಗೆದರ್ ಕಾರ್ಯಕ್ರಮ ರೂಪಿಸಿದೆ, ಅದಕ್ಕೆ ಕ್ಯಾಥರೀನಾಳನ್ನೂ ಆಹ್ವಾನಿಸಿದೆ. ಮಾರ್ಯಾ ನನ್ನನ್ನು, ನಾನು ನನ್ನೊಂದಿಗೆ ನನ್ನ ಪತಿಯ ಮಿತ್ರರನ್ನೂ ಕರೆತರಬಹುದೇ, ಅವರ ಮನೆಯಲ್ಲಿಯೇ ನಾವು ಉಳಿದುಕೊಂಡಿದ್ದೇವೆ ಎಂದು ಕೇಳಿದಳು. ನಾನು ಅವಳಿಗೆ, ನೀನು ಕರೆದುಕೊಂಡು ಬರಬಹುದು ಎಂದೆ. ನನಗೆ ಅದು ಚಾರಿತ್ರಿಕ ದಿನವಾಯಿತು. ಮೈಕೇಲ್‌ನ ಆ ಮಿತ್ರ ಬೇರಾರೂ ಆಗಿರದೆ ಮಾರ್ಕೋ ಆಗಿದ್ದ! ನಾವಿಬ್ಬರು ಪರಸ್ಪರರ ಎದುರಿಗಿದ್ದೆವು, ನಮ್ಮ ಆಶ್ಚರ್ಯಕ್ಕೆ ಕೊನೆಯೇ ಇರಲಿಲ್ಲ. ನಾವಿಬ್ಬರು ಈ ಮೊದಲೇ ಭೇಟಿಯಾಗಿರುವ ವಿಷಯ ತಿಳಿದು ಮಾರ್ಯಾ ಮತ್ತು ಮೈಕೇಲ್‌ಗೆ ಆಶ್ಚರ್ಯವಾಗಿತ್ತು.

ಇದರ ಶ್ರೇಯಸ್ಸು ಕ್ಯಾಥರೀನಾಗೆ ಕೊಡಲೋ ಅಥವಾ ಮಾರ್ಯಾಗೆ ಕೊಡಲೋ ಅಥವಾ ನನ್ನ ಅದೃಷ್ಟಕ್ಕೆ ಕೊಡಲೋ? ಸರಿ, ಮಾರ್ಕೋನೊಂದಿಗೆ ನನ್ನ ಸಂಪರ್ಕ ಗಟ್ಟಿಯಾಯಿತು. ಮರುದಿನದಿಂದಲೇ ನಮ್ಮ ಸಂಜೆಗಳು ಸಾಮಾನ್ಯವಾಗಿ ಮಾರ್ಕೋನೊಂದಿಗೆ ಮಾತುಕತೆಯಲ್ಲಿ ಕಳೆಯಲಾರಂಭಿಸಿದವು. ನಾವು ವಾರದಲ್ಲಿ ಕಡೇಪಕ್ಷ ಒಮ್ಮೆಯಂತೂ ಅಗತ್ಯವಾಗಿ ಭೇಟಿಯಾಗುತ್ತಿದ್ದೆವು; ಆಗ ಸಂತೋಷದಿಂದ ಕಾಲ ಕಳೆಯುತ್ತಿದ್ದೆವು. ಅವನು ನನ್ನೊಂದಿಗೆ ಇದ್ದಾಗ ನನಗೆ ತುಂಬಾ ಹಿತವಾಗುತ್ತಿತ್ತು. ಅವನು ಸದಾ ನಗುನಗುತ್ತಾ ಇರುತ್ತಿದ್ದ. ನಮ್ಮ ಗೆಳೆತನ ಸದಾ ಹೀಗೆಯೇ ಇರಲಿ ಎಂದು ನಾನು ಬಯಸುತ್ತಿದ್ದೆ. ಗೆಳೆತನಕ್ಕಿಂತ ಹೆಚ್ಚಾಗಿ ಬೇರೇನೂ ಯೋಚಿಸಿರಲಿಲ್ಲ. ಆದರೆ ಅವನು ಗೆಳೆತನಕ್ಕಿಂತ ಸ್ವಲ್ಪ ಹೆಚ್ಚನ್ನು ಬಯಸುತ್ತಿದ್ದ.

ನಾನು ನಿನ್ನ ಬಗ್ಗೆ ಅಂಥದ್ದೇನೂ ಯೋಚಿಸುವುದಿಲ್ಲವೆಂದು ಮಾರ್ಕೋಗೆ ಸ್ಪಷ್ಟಪಡಿಸಿದ್ದೆ. ಆದರೆ ಅವನು ಸೋಲೊಪ್ಪಿಕೊಳ್ಳುವ ವ್ಯಕ್ತಿಯಾಗಿರಲಿಲ್ಲ. ಒಮ್ಮೆ ಇದ್ದಕ್ಕಿಂದ್ದಂತೆ ಮೂವಿಗೆ ಹೋಗುವ ಪ್ರೋಗ್ರಾಮ್ ಹಾಕಿದರೆ, ಇನ್ನೊಮ್ಮೆ ಕಾಫಿ ಬಾರಿಗೆ ಹೋಗುವ, ಬೋಟಿಂಗ್‌ಗೆ ಹೋಗುವ, ಬೈಕಿಂಗ್‌ಗೆ ಹೋಗುವ ಪ್ರೋಗ್ರಾಮ್ ಹಾಕುತ್ತಿದ್ದ. ನನಗೆ ಸ್ವಿಮಿಂಗ್ ಬಗ್ಗೆ ಇರುವ ಆಸಕ್ತಿಯನ್ನು ನೋಡಿ ವಾಟರ್ ಸ್ಪೋರ್ಟ್ಸ್ ಕಾರ್ಯಕ್ರಮ ಏರ್ಪಡಿಸುತ್ತಿದ್ದ. ನಾನು ನಿನ್ನ ಹೋಲಿಕೆಯಲ್ಲಿ ತುಂಬಾ ವೃದ್ಧೆ ಎಂದು ಸದಾ ತಿಳಿ ಹೇಳಲು ಪ್ರಯತ್ನಿಸಿದೆ. ಅವನು ಓರ್ವ ಗೆಳೆಯನಾಗಿ ಕೇಳುತ್ತಿಲ್ಲ ಎಂಬುದು ನನಗೆ ಅರ್ಥವಾಗಿತ್ತು. ಆದರೆ ಈಚೆಗೆ ನನ್ನ ಮನಸ್ಸು ಸಹ ಸೋಲುತ್ತಿತ್ತು.

ಅಂದು ಕೋಪನಹೇಗನ್ನಿನ ಥಿಯೇಟರಿನಲ್ಲಿ ಅವನೊಂದಿಗೆ ನಾಟಕವೊಂದನ್ನು ನೋಡಲು ಹೋದೆ. ನಾವು ಥಿಯೇಟರಿನಲ್ಲಿ ಗೆಳೆಯರಂತೆಯೇ ಕೂತು ನಾಟಕವನ್ನು ನೋಡುತ್ತಿದ್ದೆವು. ಆದರೆ ಏಕೋ ನನ್ನ ಮನಸ್ಸು, ಅವನು ಮುಂದೆ ಬಂದು ನನ್ನ ಕೈಯನ್ನು ಹಿಡಿದುಕೊಳ್ಳಲಿ ಎಂದು ಬಯಸಿತು. ಆದರೆ ಅವನು ಹೀಗೆ ಮಾಡದಿದ್ದಾಗ ನನಗೆ ನಿರಾಸೆಯಾಯಿತು. ನಾನು ನನ್ನ ಭಾವಾವೇಗವನ್ನು ಹತ್ತಿಕ್ಕಿಕೊಳ್ಳಬೇಕೆಂದು ನನಗೆ ನಾನೇ ಹೇಳಿಕೊಂಡೆ. ನಂತರ ನಾಟಕವನ್ನು ನೋಡುವಲ್ಲಿ ಮಗ್ನಳಾಗಲು ಪ್ರಯತ್ನಿಸಿದೆ. ನಾಟಕ ಮುಗಿದ ನಂತರ ಅವನು ನನಗೆ ಕಾಫಿಗೆ ಹೋಗೋಣವೇ ಎಂದು ಕೇಳಿದ. ನಾನು ಒಪ್ಪಿದೆ. ನಂತರ ಕಾಫಿ ಯಾವಾಗ ಡಿನ್ನರ್ ಆಗಿ ಬದಲಾಯಿತೋ ತಿಳಿಯಲಿಲ್ಲ. ನಮ್ಮ ಮಾತು ಮುಗಿಯುತ್ತಲೇ ಇರಲಿಲ್ಲ. ನಾವು ಒಂದೇ ಸಮನೆ ಪ್ರತಿಯೊಂದು ವಿಷಯದ ಬಗ್ಗೆ ಮಾತನಾಡುತ್ತಿದ್ದೆವು! ನಡುರಾತ್ರಿಗೆ ನಾವು ಮನೆಗೆ ಹೋಗಬೇಕು ಎಂದು ಕಂಡಿತು. ಅವನು ನನ್ನನ್ನು ಕಾರಿನಲ್ಲಿ ಮನೆಗೆ ಬಿಡುವುದಾಗಿ ಹೇಳಿದ. ನಾನು ಅವನೊಂದಿಗೆ ಕಾರಿನಲ್ಲಿ ಕೂತೆ.

ಸ್ವಲ್ಪ ಹೊತ್ತು ನಮ್ಮಿಬ್ಬರ ನಡುವೆ ವಿಚಿತ್ರ ಮೌನವೊಂದು ಆವರಿಸಿತು. ಅವನು ಈಗ ಏನೋ ಹೇಳುವವನಿದ್ದಾನೆ ಎಂದು ಅನ್ನಿಸಿತು; ಹೀಗಾಗಿ ನಾನೇ ಮೊದಲು ಹೇಳಿದೆ, 'ನಾನು ನಿಮ್ಮನ್ನು ಒಬ್ಬ ಗೆಳೆಯನಂತೆ ಪ್ರೀತಿಸುತ್ತೇನೆ, ಆದರೆ ನಾನಿನ್ನೂ ರಿಲೇಶನ್‌ಶಿಪ್ ಬಗ್ಗೆ ಯೋಚಿಸಿಲ್ಲ, ಸಿದ್ಧಳೂ ಆಗಿಲ್ಲ.'

ಅವನು ನನ್ನನ್ನು ನೋಡಿ ಮುಗುಳ್ನಕ್ಕು, 'ಓಕೆ' ಎಂದಷ್ಟೇ ಹೇಳಿದ. ಏನು ಆಗುತ್ತಿದೆಯೆಂದು ನನಗೆ ತಿಳಿಯುತ್ತಿರಲಿಲ್ಲ. ನಾನು ತಪ್ಪಾಗಿ ಮಾತನಾಡಿದೆನೇ? ದೇವರೇ, ಅವನಿಗೆ ಹೀಗೇಕೆ ಹೇಳಿದೆ! ಆದರೆ ಈಗ ಆ ಶಬ್ದಗಳನ್ನು ಮರಳಿ ಪಡೆಯಲು ಸಾಧ್ಯವಿರಲಿಲ್ಲ; ನಾವು ನನ್ನ ಮನೆಯ ಸಮೀಪಕ್ಕೆ ಬಂದಿದ್ದೆವು, ಪರಸ್ಪರ ಗುಡ್‌ನೈಟ್ ಹೇಳಿಕೊಂಡೆವು. ನಂತರ ಅವನು ಹೊರಟುಹೋದ.

ಒಂದು ವಾರದವರೆಗೆ ಅವನು ನನ್ನನ್ನು ಸಂಪರ್ಕಿಸಲಿಲ್ಲ. ಅವನು ಫೋನೂ ಮಾಡಲಿಲ್ಲ, ಮೆಸೇಜೂ ಕಳುಹಿಸಲಿಲ್ಲವೆಂದು ನಾನು ಹತಾಶಳಾದೆ. ನಾನು ಅವನನ್ನು ತುಂಬಾ ಮಿಸ್ ಮಾಡಿಕೊಳ್ಳುತ್ತಿದ್ದೆ. ಅವನು ಒಂದು ಬಾರಿ ಫೋನ್ ಮಾಡಲೆಂದು ಬಯಸುತ್ತಿದ್ದೆ. ನನ್ನ ಗಮನ ಬೇರೆ ಕೆಲಸಗಳಲ್ಲಿ ಇರಲಿಲ್ಲ. ನಿರಂತರವಾಗಿ ಅವನ ಬಗ್ಗೆಯೇ ಯೋಚಿಸುತ್ತಿದ್ದೆ, ಅವನೇಕೆ ಫೋನ್ ಮಾಡಲಿಲ್ಲವೆಂದು ಯೋಚಿಸುತ್ತಿದ್ದೆ.

ನಾನು ಅವನಿಗೆ ಫೋನ್ ಮಾಡಬೇಕೋ ಬೇಡವೋ ಎಂದೂ ತೀರ್ಮಾನಿಸದಾದೆ. ಏಕೆಂದರೆ ಬಹುಶಃ ನಾನೇ ಅವನನ್ನು ಅಪ್‌ಸೆಟ್ ಮಾಡಿದ್ದೆ. ಕಡೆಗೆ ಕಾಯಲು ನಿರ್ಧರಿಸಿದೆ. ಅವನು ಶೀಘ್ರವೇ ಫೋನ್ ಮಾಡುತ್ತಾನೆಂದು ಭರವಸೆಯನ್ನು ತಾಳಿದೆ. ಸುಮಾರು ಎಂಟು ದಿನಗಳ ನಂತರ ನನ್ನ ಮೊಬೈಲ್ ರಿಂಗ್ ಆಯಿತು. ನಾನು ಮೊಬೈಲ್ ತೆಗೆದುಕೊಳ್ಳಲು ಹೋಗುವುದಕ್ಕೂ ಮೊದಲು, ಇದು ಮಾರ್ಕೋ ಮಾಡಿದ ಕಾಲ್ ಆಗಿರಲೆಂದು ದೇವರಲ್ಲಿ ಪ್ರಾರ್ಥಿಸುತ್ತಿದ್ದೆ. ಮೊಬೈಲ್‌ನಲ್ಲಿ 'ಮಾರ್ಕೋ ಲೆರಾಯ್' ಹೆಸರನ್ನು ನೋಡಿದೆ. ತುಂಬಾ ದಿನಗಳ ನಂತರ ಮೊಬೈಲ್ ಸ್ಕ್ರೀನ್‌ನಲ್ಲಿ ಒಬ್ಬರ ಹೆಸರನ್ನು ನೋಡಿ ನನಗೆ ತುಂಬಾ ಸಂತಸವಾಯಿತು. ಕಳವಳವೂ ಕಾಡಿತು. ಅವನೇಕೆ ಫೋನ್ ಮಾಡಿರಬಹುದು? ಅವನೇನು ಹೇಳಬಹುದು? ನಾನು ಆಸೆ ಮತ್ತು ಅನುಮಾನದಿಂದ ಉತ್ತೇಜಿತಳಾದೆ.

ಮಾರ್ಕೋ ಅದೂ ಇದೂ ಮಾತನಾಡಿ, ನಂತರ 'ಸಂಜೆ ನಾಲ್ಕು ಗಂಟೆಗೆ ಕೆಫೆಯಲ್ಲಿ ಭೇಟಿಯಾಗಿ' ಎಂದು ಹೇಳಿದ. ನಾನು ಚೆನ್ನಾಗಿ ಶೃಂಗರಿಸಿಕೊಂಡು ಅವನನ್ನು ಭೇಟಿಯಾಗಲು ಹೊರಟೆ. ಅವನು ನನ್ನ ಚುಂಬನ ಪಡೆದು, ನಾನು ನಿಮ್ಮನ್ನು ಪ್ರೀತಿಸುತ್ತೇನೆ ಎಂದ. ನಾನು ಅವನಿಗೆ ಸ್ಪಷ್ಟವಾಗಿ, 'ನಮ್ಮ ವಯಸ್ಸಿನಲ್ಲಿ ತುಂಬಾ ಅಂತರವಿದೆ, ನಾನು ನಿಮಗಿಂತ ಆರು ವರ್ಷ ದೊಡ್ಡವಳು. ಹದಿನೆಂಟರ ವಯಸ್ಸಿನ ಮಗನ ತಾಯಿ' ಎಂದೆ.

'ನನಗೆ ಕಡಿಮೆ ವಯಸ್ಸಿನ ಹುಡುಗಿ ಬೇಕೆಂದು ಯಾರು ಹೇಳುತ್ತಿದ್ದಾರೆ? ನನಗೆ ಪರಿಪಕ್ವ,